ದಿಃ 04.04.2024 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು

ಮುಖ್ಯ ವಿಚಾರಣೆಃ ಶ್ರೀಮತಿ ಕೆ.ವಿ., ವಕೀಲರಿಂದ ವಾದಿ ಪರವಾಗಿ

1. ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣಪತ್ರದ ಮೂಲಕ ಸಲ್ಲಿಸಿದ್ದು ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ನನಗೆ ತಿಳಿದಿವೆ ಹಾಗೂ ಸತ್ಯವಾಗಿವೆ. ಅದರಲ್ಲಿರುವ ಸಹಿ ನನ್ನದೇ ಆಗಿರುತ್ತದೆ.
2. ದಿಃ 26.09.2017 ರ ಕ್ರಯದ ಕರಾರು ಪತ್ರವನ್ನು ಹಾಜರು ಮಾಡಿದ್ದು ನಿ.ಪಿ.1 ಎಂದು ಗುರುತಿಸಲಾಯಿತು, ದಿಃ 05.07.2021 ರಂದು 1 ನೇ ಪ್ರತಿವಾದಿಗೆ ನೀಡಿದ ನೋಟೀಸನ್ನು ಹಾಜರು ಮಾಡಿದ್ದು ನಿ.ಪಿ.2 ಎಂದು ಗುರುತಿಸಲಾಯಿತು, ಅಂಚೆ ರಸೀದಿಯನ್ನು ಹಾಜರು ಮಾಡಿದ್ದು ನಿ.ಪಿ.3 ಎಂದು ಗುರುತಿಸಲಾಯಿತು, ಅಂಚೆ ಸ್ವೀಕೃತಿಯನ್ನು ಹಾಜರು ಮಾಡಿದ್ದು ನಿ.ಪಿ.4 ಎಂದು ಗುರುತಿಸಲಾಯಿತು, ಋಣಭಾರ ಪತ್ರವನ್ನು ಹಾಜರು ಮಾಡಿದ್ದು ನಿ.ಪಿ.5 ಎಂದು ಗುರುತಿಸಲಾಯಿತು, ದಿಃ 19.03.2018 ರ ಕ್ರಯ ಪತ್ರದ ದೃಢೀಕೃತ ನಕಲನ್ನು ಹಾಜರು ಮಾಡಿದ್ದು ನಿ.ಪಿ.6 ಎಂದು ಗುರುತಿಸಲಾಯಿತು.

   (ಮುಂದುವರೆದ ಮುಖ್ಯ ವಿಚಾರಣೆಗೆ ಕಾಲವಕಾಶ ಕೋರಿದ್ದು, ಕಾಲವಕಾಶ ನೀಡಲಾಯಿತು)

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.

ಸಾಕ್ಷಿಯ ಸಹಿ

ಮಾ

ದಿಃ 03.12.2024 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು

ಮುಂದುವರೆದ ಮುಖ್ಯ ವಿಚಾರಣೆಃ ಶ್ರೀಮತಿ ಕೆ.ವಿ., ವಕೀಲರಿಂದ ವಾದಿ ಪರವಾಗಿ

3. ದಾನ ಪತ್ರದ ದೃಢೀಕೃತ ನಕಲನ್ನು ಹಾಜರು ಮಾಡಿದ್ದು ನಿ.ಪಿ.7 ಎಂದು ಗುರುತಿಸಲಾಯಿತು.
4. ದಾವೆಯನ್ನು ಡಿಕ್ರಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಪಾಟೀ ಸವಾಲು ಶ್ರೀ ಡಿ.ಎಸ್ ವಕೀಲರಿಂದ ಪ್ರತಿವಾದಿ ಪರವಾಗಿ

5. ಪಾಟೀ ಸವಾಲಿಗಾಗಿ ಸಮಯಾವಕಾಶ ಕೋರಿರುತ್ತಾರೆ, ಸಮಯಾವಕಾಶ ನೀಡಲಾಗಿದೆ.

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.

ಸಾಕ್ಷಿಯ ಸಹಿ

ಮಾ

ದಿಃ 05.06.2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು

ಪಾಟೀ ಸವಾಲು ಶ್ರೀ ಡಿ.ಎಸ್ ವಕೀಲರಿಂದ **2** ನೇ ಪ್ರತಿವಾದಿ ಪರವಾಗಿ

6. ನಾನು ಪಿ.ಯು.ಸಿ ವರೆಗೆ ಕಲಿತ್ತಿದ್ದೇನೆ. ನಾನು 2007 ರಲ್ಲಿ ಗೋಪಾಲಕೃಷ್ಣ ರವರನ್ನು ಮದುವೆಯಾಗಿದ್ದೇನೆ. ಗೋಪಾಲಕೃಷ್ಣ ರವರು ತೀರಿಕೊಂಡಾಗ ಅವರಿಗೆ 44 ವರ್ಷ ಆಗಿತ್ತು. ಅವರು ತೀರಿಕೊಳ್ಳುವಾಗಿ ಅವರ ಆರೋಗ್ಯ ಚೆನ್ನಾಗಿ ಇತ್ತು. ಗೋಪಾಲಕೃಷ್ಣರವರಿಗೆ ಮದ್ಯಪಾನ ಮಾಡುವ ಅಭ್ಯಾಸ ಇತ್ತು ಎಂದರೆ ಸರಿಯಲ್ಲ. ನನ್ನ ಮದುವೆಗೂ ಮೊದಲು ಗೋಪಾಲಕೃಷ್ಣರವರು ಎಲ್ಲಿ ವಾಸವಾಗಿದ್ದರು ಎಂದು ನನಗೆ ಗೊತ್ತಿಲ್ಲ. ನನ್ನ ಮಾವ ಪ್ರಕಾಶ್ ಮೂರ್ತಿ ರವರು ಇದ್ದಾರೆ. ಪ್ರಕಾಶ್ ಮೂರ್ತಿ ರವರು ಹಿಂದೆ ಕಳಸ ಪೊಲೀಸ್ ಠಾಣೆಯಲ್ಲಿ ಎ.ಎಸ್.ಐ ಆಗಿದ್ದರು ಎಂದರೆ ನನಗೆ ಗೊತ್ತಿಲ್ಲ. ನನ್ನ ಗಂಡ ಗೋಪಾಲಕೃಷ್ಣ ಬದುಕಿದ್ದಾಗ ನನ್ನನ್ನು ಮದುವೆಯಾಗುವ ಮೊದಲು ಅವರು ಯಾವ ಯಾವ ಸ್ಥಳಗಳಲ್ಲಿ ವಾಸವಿದ್ದರು ಎಂದು ವಿಚಾರಿಸಿರಲಿಲ್ಲ. ನನಗೆ 16 ವರ್ಷದ ಒಬ್ಬಳು ಮಗಳು ಇರುತ್ತಾಳೆ. ನನ್ನ ಗಂಡ ತರಕಾರಿ ವ್ಯಾಪಾರ ಮತ್ತು Real Estate ವ್ಯವಹಾರವನ್ನು ಮಾಡುತ್ತಿದ್ದರು. ನನ್ನ ಗಂಡ ತರಕಾರಿಯ ಅಂಗಡಿಯನ್ನು ಹೊಂದಿರಲಿಲ್ಲ ಪ್ಲಾಟ್ ಗಳಲ್ಲಿಯೇ ಖರೀದಿಸಿ ಕಳುಹಿಸುತ್ತಿದ್ದರು.
7. 2007 ರಿಂದ ನನ್ನ ಗಂಡ ಮರಣಹೊಂದುವವರೆಗೂ ಅವರ ಆರ್ಥಿಕ ಪರಿಸ್ಥಿತಿ ನನಗೆ ಗೊತ್ತು. ನನ್ನ ಗಂಡ ಬದುಕಿದ್ದಾಗ ಪ್ರತಿ ದಿನಗಳು 45 ಸಾವಿರ ಆಧಾಯ ಗಳಿಸುತ್ತಿದ್ದರು. ಪ್ರತಿ ತಿಂಗಳು ನಮ್ಮ ಮನೆಯ ಖರ್ಚು ಎಷ್ಟು ಆಗುತ್ತಿತ್ತು ಎಂದು ನನಗೆ ಗೊತ್ತಿಲ್ಲ. ನನ್ನ ಗಂಡ ನನ್ನ ಮದುವೆಯಾದಾಗಿನಿಂದ ಎಷ್ಟು ಉಳಿತಾಯ ಮಾಡಿದ್ದರು ಎಂದು ನನಗೆ ಗೊತ್ತಿಲ್ಲ. ನನ್ನ ಅತ್ತೆಗೆ stroke ಆಗಿತ್ತು, ಬಿ.ಪಿ ಮತ್ತು ಸಕ್ಕರೆ ಖಾಯಿಲೆ ಇತ್ತು. ನಾನು, ನನ್ನ ಗಂಡ, ನನ್ನ ಅತ್ತೆ ಮಾವ ಮತ್ತು ಮಗಳು ಒಟ್ಟಿಗೆ ವಾಸವಿದ್ದೆವು.
8. ದಿಃ 26.09.2017 ರಂದು ನನ್ನ ಗಂಡ ಕಳಸಕ್ಕೆ ಹೋಗಿದ್ದರು. ನನ್ನ ಗಂಡ

ಬೆಂಗಳೂರಿಗೆ ಹೋದ ದಿನಾಂಕ ಹೇಳಲು ನೆನಪಿಲ್ಲ. ಅಬ್ದುಲ್ ಅಶ್ರಫ್ ಎಂಬುವವರು ನಿಮಗೆ ಗೊತ್ತಾ ಎಂದರೆ ಸಾಕ್ಷಿಯು ಹೆಸರು ಕೇಳಿದ್ದೇನೆ ಎಂದು ನುಡಿಯುತ್ತಾರೆ. ನನ್ನ ಗಂಡ ತೀರಿಕೊಳ್ಳುವ ಮೊದಲು ಈ ಕೇಸು ನಡೆಯುತ್ತಿದೆ ಎಂದು ನನಗೆ ತಿಳಿದಿತ್ತು. ಈ ಕೇಸನ್ನು ನನ್ನ ಗಂಡ ಅಬ್ದುಲ್ ಅಶ್ರಫ್ ಎಂಬ ಒಬ್ಬರ ಮೇಲೆ ಸಲ್ಲಿಸಿದ್ದರು. ಈ ಕೇಸಿನಲ್ಲಿ ಎಷ್ಟು ಪ್ರತಿವಾದಿಗಳು ಇದ್ದಾರೆ ಎಂದು ಹೇಳಲು ಆಗುತ್ತದೆ ಎಂದರೆ ಸಾಕ್ಷಿ ಅಬ್ದುಲ್ ಅಶ್ರಫ್ ಒಬ್ಬರೆ ಇದ್ದಾರೆ ಎಂದು ನುಡಿಯುತ್ತಾರೆ.

9. ಕಂಪ್ಯೂಟರ್ ಮತ್ತು ಟೈಪ್ ರೈಟಿಂಗ್ ಯಂತ್ರವನ್ನು ನಾನು ನೋಡಿದ್ದೇನೆ. ಕಂಪ್ಯೂಟರ್ ಮತ್ತು ಟೈಪ್ ರೈಟಿಂಗ್ ಯಂತ್ರದಲ್ಲಿ ಟೈಪ್ ಆಗಿರುವುದನ್ನು ನಾನು ಗುರುತಿಸಬಲ್ಲೆ. ಸಾಕ್ಷಿಗೆ ನಿ.ಪಿ.1 ದಾಖಲೆಯ ಪ್ರಥಮ ಪುಟವನ್ನು ತೋರಿಸಿ ಅಲ್ಲಿ ಬರೆದಿರುವ ಬರವಣಿಗೆ ಕಂಪ್ಯೂಟರ್ ನಲ್ಲಿ ಟೈಪ್ ಆಗಿದೆಯೋ ಅಥವ ಟೈಪ್ ರೈಟಿಂಗ್ ನಲ್ಲಿ ಟೈಪ್ ಆಗಿದೆಯೋ ಎಂದು ಕೇಳಲಾಗಿ ಸಾಕ್ಷಿ ಕಂಪ್ಯೂಟರ್ ನಲ್ಲಿ ಟೈಪ್ ಆಗಿಲ್ಲ ಎಂದು ನುಡಿಯುತ್ತಾರೆ. ನಿ.ಪಿ.1 ರ ಶಿರೋ ನಾಮೆಯಲ್ಲಿ ಬರೆದಿರುವ Agreement of Sale ಮತ್ತು Without Possession ಎಂದು ಬರೆದಿರುವಲ್ಲಿ ವ್ಯತ್ಯಾಸ ಇದೆ ಎಂದರೆ ಸರಿ. ನಿ.ಪಿ.1 ರಲ್ಲಿ ದಿನಾಂಕವನ್ನು 26 ಎಂದು ತಿದ್ದಿ ಬರೆಯಲಾಗಿದೆ ಎಂದರೆ ಸರಿ. ನಿ.ಪಿ.1 ರಲ್ಲಿ ಮುದ್ರಾಂಕ ಇಲಾಖೆಯ ಅಚ್ಚು ಇರುವ ಕಡೆ ಯಾವುದೇ ದಿನಾಂಕ ನಮೂದಾಗಿಲ್ಲ ಎಂದರೆ ಸರಿ. ನಿ.ಪಿ.1 ರಲ್ಲಿ ಹಾಕಿರುವ ಅಚ್ಚು sub-register ಕಚೇರಿಯಲ್ಲಿ ಮಾಡಿಲ್ಲ ಎಂದರೆ ಸರಿಯಲ್ಲ.

10. ನಿ.ಪಿ.1 ರಲ್ಲಿ ಹಾಕಿರುವ ಅಚ್ಚನ್ನು ನನ್ನ ಗಂಡ, ತಾಲೂಕು ಪಂಚಾಯಿತಿಯಲ್ಲಿ ದಿನಗೂಲಿ ನೌಕರನಾಗಿದ್ದ ಪ್ರವೀಣ್ ಬಿ.ಎಂ ಮತ್ತು ಈ ಹಿಂದಿನ ತಾಲೂಕು ಪಂಚಾಯಿತಿ ಸದಸ್ಯ ರಫೀಕ್ ಮತ್ತು ನಿ.ಪಿ.1 ಕ್ಕೆ ಸಾಕ್ಷಿ ಹಾಕಿರುವ ಮಹೇಶ್ ರವರು ಸೃಷ್ಟಿಸಿದ್ದಾರೆ ಎಂದರೆ ಸುಳ್ಳು. ಮಹೇಶ್ ರವರ ಪರಿಚಯ ನನಗೆ ಇದ್ದಾರೆ. ಅವರು ನಮ್ಮ ಪಕ್ಕದ ಮನೆಯವರು, ಅವರು ಈಗ ಅಲ್ಲಿಯೇ ಇದ್ದಾರೆ. ಮಹೇಶ್ ರವರನ್ನು ಈ ಕೇಸಿನಲ್ಲಿ ಸಾಕ್ಷಿಯಾಗಿ ನಾವು

ವಿಚಾರಣೆ ಮಾಡಿಲ್ಲ ಎಂದರೆ ಸರಿ.

11. ನನ್ನ ಗಂಡ ಏನು agreement ಮಾಡಿಕೊಂಡಿದ್ದಾರೆ ಎಂದು ನನಗೆ ಗೊತ್ತು. ನನ್ನ ಗಂಡ ಸೈಟ್ ಖರೀದಿಸಲು agreement ಮಾಡಿಕೊಂಡಿದ್ದರು. ಆ ಸೈಟ್ ನ ವಿಸ್ತೀರ್ಣ 53 x 32 ಆಗಿತ್ತು. ಆ ಸೈಟ್ ನ ಇ-ಸ್ವತ್ತಿನ ಸಂಖ್ಯೆ 1995969798 ಆಗಿತ್ತು. ಮಕ್ಕಳನ್ನು ಶಾಲೆಗೆ ಸೇರಿಸುವಾಗ ಪ್ರಮಾಣ ಪತ್ರವನ್ನು ಮಾಡಿಸುವ ಬಗ್ಗೆ ನನಗೆ ಗೊತ್ತು. ಪ್ರಮಾಣ ಪತ್ರವನ್ನು ಯಾವುದರ ಮೇಲೆ ಮಾಡುತ್ತಾರೆ ಎಂದರೆ ಸಾಕ್ಷಿ ನಾವು ಮಾಡಿಸಲು ನೀಡುತ್ತೇವೆ, ಅವರು ಮಾಡಿಕೊಡುತ್ತಾರೆ ಎಂದು ನುಡಿಯುತ್ತಾರೆ. ನಾನು ಇ-ಸ್ಟಾಂಪ್ ಪೇಪರ್ ಅನ್ನು ನೋಡಿಲ್ಲ. 2008 ರಲ್ಲಿಯೇ ಕರ್ನಾಟಕ ಸರ್ಕಾರ ಇ-ಸ್ಟಾಂಪ್ ಆರಂಭಿಸಿದಾಗ ನಿ.ಪಿ.1 ರಲ್ಲಿ ಕಂಡು ಬರುವ ಅಚ್ಚನ್ನು ಹಾಕುವುದನ್ನು ನಿಷೇಧಿಸಲಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ಕರ್ನಾಟಕ ಸರ್ಕಾರ ಅಚ್ಚು ಹಾಕುವುದನ್ನು ನಿಷೇಧಿಸಿದ್ದರಿಂದ ನನ್ನಗಂಡ ಹಾಜರು ಪಡಿಸಿರುವ ನಿ.ಪಿ.1 ಅಸಿಂಧು ಆದ ದಾಖಲೆ ಎಂದರೆ ನನಗೆ ಗೊತ್ತಿಲ್ಲ.

12. ನನಗೆ ಅಬ್ದುಲ್ ಅಜೀಜ್ ರವರ ಪರಿಚಯ ಇದೆ. ಅಬ್ದುಲ್ ಅಶ್ರಫ್ ರವರು ಸೈಟ್ ನ ಅಕ್ಕ ಪಕ್ಕದ ಜಾಗವನ್ನು ಬೇರೆಯವರಿಗೆ ಮಾರಾಟ ಮಾಡಿದ ಬಗ್ಗೆ ನನಗೆ ಗೊತ್ತಿಲ್ಲ. ನನ್ನ ಗಂಡ ಬದುಕಿದ್ದಾಗ ನಿ.ಪಿ.1 ದಾಖಲೆಯನ್ನು ಸೃಷ್ಟಿಸಿದ್ದ ಎಂದರೆ ಸರಿಯಲ್ಲ. ನಿ.ಪಿ.1 ದಾಖಲೆಯ ಮೇಲೆ ಅಚ್ಚನ್ನು ಹಾಕಿಸಿ ಸರ್ಕಾರಕ್ಕೆ ನನ್ನ ಗಂಡ ಮೋಸ ಮಾಡಿದ್ದಾರೆ ಎಂದರೆ ಸರಿಯಲ್ಲ. ನಿ.ಪಿ.1 ರ ತರಹದ ದಸ್ತಾವೇಜು ಹಾಳೆಗಳು ಕಳಸ, ಮೂಡಿಗೆರೆ ಮತ್ತು ಚಿಕ್ಕಮಗಳೂರಿನಲ್ಲಿ ಸಿಗುತ್ತವೆ ಎಂದರೆ ಸರಿ. ಮೂಡಿಗೆರೆ ಮತ್ತು ಚಿಕ್ಕಮಗಳೂರಿನಲ್ಲಿ ಉಪನೊಂದಾವಣಿ ಕಚೇರಿ ಇದೆ ಎಂದರೆ ಸರಿ. ನನ್ನ ಗಂಡ ದಸ್ತವೇಜಿನಲ್ಲಿ ಅಚ್ಚು ಹಾಕಿಸುವುದನ್ನು ಮೂಡಿಗೆರೆ ಮತ್ತು ಚಿಕ್ಕಮಗಳೂರಿನ ಉಪ ನೊಂದಾವಣಿ ಕಚೇರಿಯಲ್ಲಿ ಮಾಡಿಸಬಹುದಿತ್ತು ಎಂದರೆ ನನಗೆ ಗೊತ್ತಿಲ್ಲ. ಮೋಸ ಮಾಡುವ ಉದ್ದೇಶದಿಂದ ಮತ್ತು ದಾಖಲೆಯನ್ನು ಸೃಷ್ಟಿಸುವ ಉದ್ದೇಶದಿಂದ ನನ್ನ ಗಂಡ ಬೆಂಗಳೂರಿನ ಶಿವಾಜಿನಗರದ ಉಪ ನೊಂದಾವಣಿ ಕಚೇರಿಯ ಸೀಲನ್ನು

ಸೃಷ್ಟಿಸಿದ್ದಾರೆ ಎಂದರೆ ಸರಿಯಲ್ಲ. ನನ್ನ ಗಂಡ ಬದುಕಿದ್ದಾಗ ಬ್ಯಾಂಕಿನಲ್ಲಿ ಖಾತೆಯನ್ನು ಹೊಂದಿದ್ದರು. ನನ್ನ ಗಂಡನಿಗೆ ಚೆಕ್ಕು ಮೂಲಕ ವ್ಯವಹರಿಸುವ ಜ್ಞಾನ ಇತ್ತು. ಅಬ್ದುಲ್ ಅಶ್ರಫ್ ರವರಿಗೆ ಹಣವನ್ನು ನಗದಾಗಿ ನನ್ನ ಬಳಿ ಇದ್ದ ಮತ್ತು ನನ್ನ ಅಕ್ಕನ ಬಳಿ ಇದ್ದ ಒಡವೆಗಳನ್ನು ಮಾರಿ ನೀಡಿದ್ದೆವು. ಚಿನ್ನವನ್ನು ಮಾರಾಟ ಮಾಡಿದ್ದೆವು. ಎಷ್ಟು ಗ್ರಾಂ ಚಿನ್ನವನ್ನು ಮಾರಾಟ ಮಾಡಿದ್ದೆವು ಎಂದು ನೆನಪಿಲ್ಲ. ಆ ಸಮಯದಲ್ಲಿ 1 ಗ್ರಾಂ ಚಿನ್ನಕ್ಕೆ ಎಷ್ಟು ಬೆಲೆ ಇತ್ತು ಎಂದು ನೆನಪಿಲ್ಲ. ಆ ಸಮಯದಲ್ಲಿ 7 ಲಕ್ಷ ಹಣವನ್ನು ನೀಡುವ ಸಾಮರ್ಥ್ಯ ನನ್ನ ಗಂಡನಿಗೆ ಇತ್ತು ಎಂದರೆ ಸಾಕ್ಷಿ 6 ಲಕ್ಷ ಹಣವನ್ನು ಕಷ್ಟದಿಂದ ಹೊಂದಿಸಿದ್ದೆವು ಎಂದು ನುಡಿಯುತ್ತಾರೆ.

13. ನಿ.ಪಿ.1 ರ ಮಾತುಕತೆಗೆ ನಾನು ಭಾಗವಹಿಸಿರಲಿಲ್ಲ. ಕರಾರಿನ ಮಾಹಿತಿ ನನಗೆ ಸ್ವಲ್ಪ ಇತ್ತು. ಕ್ರಯದ ಕರಾರಿನ ಮಾಹಿತಿ ಇದ್ದ ಕಾರಣವೇ ನಾನು ಚಿನ್ನವನ್ನು ಮಾರಾಟ ಮಾಡಿ ಹಣವನ್ನು ನೀಡಿದ್ದೆ. ಚಿನ್ನವನ್ನು ಮಾರಾಟ ಮಾಡಿದ ಬಳಿಕ ನನ್ನ ಬಳಿ ಯಾವುದೇ ಚಿನ್ನ ಉಳಿದಿರಲಿಲ್ಲ. ನನ್ನ ಅತ್ತೆಯ ಬಳಿ ಸ್ವಲ್ಪ ಚಿನ್ನ ಇತ್ತು, ಅವರು ಯಾವುದೇ ಹಣವನ್ನು ನೀಡಿರಲಿಲ್ಲ. ನನ್ನ ಅತ್ತೆಯ ಬಳಿ ಇದ್ದ ಚಿನ್ನವನ್ನು ನಾವು ಮಾರಾಟ ಮಾಡಿರಲಿಲ್ಲ. ನನ್ನ ಗಂಡ ಹೊಂದಿದ್ದ ಖಾತೆಯ ವಿವರಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಲು ನಿಮಗೆ ತೊಂದರೆ ಇರಲಿಲ್ಲ ಎಂದರೆ ಸಾಕ್ಷಿ ನನಗೆ ಅವರು ಯಾವುದೇ ಬ್ಯಾಂಕುಗಳಲ್ಲಿ ಖಾತೆ ಹೊಂದಿದ್ದರು ಎಂದು ಅಷ್ಟಾಗಿ ತಿಳಿದಿರಲಿಲ್ಲ ಎಂದು ನುಡಿಯುತ್ತಾರೆ. ನನ್ನ ಗಂಡ ತೀರಿಕೊಂಡ ಬಳಿಕ ಅವರ ಬ್ಯಾಂಕಿನ ಖಾತೆಗಳ ಬಗ್ಗೆ ನಾನು ಪರಿಶೀಲಿಸಿದ್ದೇನೆ. ಆ ಖಾತೆಗಳನ್ನು ಪರಿಶೀಲಿಸಿದ ಬಗ್ಗೆ ನನ್ನ ಬಳಿ ದಾಖಲೆ ಇವೆ. ನನ್ನ ಗಂಡ ತೀರಿಕೊಂಡಾಗ ಅವರ ಬ್ಯಾಂಕ್ ಖಾತೆಯಲ್ಲಿ ಸುಮಾರು 1 ಲಕ್ಷದ ವರೆಗೆ ಹಣ ಇತ್ತು. ಆ ಬ್ಯಾಂಕ್ ಖಾತೆಯ ವಿವರವನ್ನು ನ್ಯಾಯಾಲಯಕ್ಕೆ ನೀಡಲು ನನಗೆ ತೊಂದರೆ ಇಲ್ಲ.

14. 2017 ರಲ್ಲಿ 6 ಲಕ್ಷ ಹಣ ನೀಡಿದಾಗ ಉಳಿದ 1 ಲಕ್ಷ ಹಣವನ್ನು 4 ವರ್ಷಗಳ ಒಳಗೆ ನೀಡುತ್ತೇವೆ ಎಂದು ಅಬ್ದುಲ್ ಅಶ್ರಫ್ ರವರಿಗೆ ನನ್ನ ಗಂಡ

ತಿಳಿಸಿದ್ದರು. ನಿ.ಪಿ.1 ಅನ್ನು ಚಿಕ್ಕಮಗಳೂರಿನಲ್ಲಿ ತಯಾರಿಸಿದ್ದರು. ನಿ.ಪಿ.1 ಅನ್ನು ಯಾರು ಟೈಪ್ ಮಾಡಿದ್ದಾರೆ ಎಂದರೆ ಸಾಕ್ಷಿ ಡಿ.ಆರ್. ಕಚೇರಿಯಲ್ಲಿ ತಯಾರಿಸಿದ್ದರು ಎಂದು ನುಡಿಯುತ್ತಾರೆ. ನಿ.ಪಿ.1 ರಲ್ಲಿ ಅಬ್ದುಲ್ ಅಶ್ರಫ್ ರವರು ಕ್ರಯ ಮಾಡಿಕೊಡದೇ ಹೊದರೆ ನ್ಯಾಯಾಲಯದಿಂದ ಕ್ರಯ ಪತ್ರವನ್ನು ಬರೆಸಿಕೊಳ್ಳುವ ಆದೇಶ ಪಡೆಯುವುದಾಗಿ ಬರೆದಿದೆ ಎಂದರೆ ನನಗೆ ಗೊತ್ತಿಲ್ಲ. ಬೇರೆ ಯಾರಿಗಾದರು ಆಸ್ತಿಯನ್ನು ಮಾರಾಟ ಮಾಡಿದರೆ ಆ ಕ್ರಯ ಈ ಕ್ರಯದ ಕರಾರಿಗೆ ಅನ್ವಯಿಸುವುದಿಲ್ಲ ಎಂದು ಬರೆದಿದೆ ಎಂದರೆ ನನಗೆ ಗೊತ್ತಿಲ್ಲ.

15. ನನ್ನ ಗಂಡ ಬದುಕಿದ್ದಾಗ 1 ನೇ ಪ್ರತಿವಾದಿ ಬಲ್ಕಿಶ್ ಎಂಬುವವರಿಗೆ ಆಸ್ತಿಯನ್ನು ಮಾರಾಟ ಮಾಡಿದ್ದಾರೆ ಎಂದು ತಿಳಿಸಿದ್ದರು. ಯಾವ ವರ್ಷದಲ್ಲಿ 1 ನೇ ಪ್ರತಿವಾದಿ ಆಸ್ತಿಯನ್ನು ಬಲ್ಕಿಶ್ ಎಂಬುವವರಿಗೆ ಮಾರಾಟ ಮಾಡಿದ್ದರು ಎಂದು ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿ 19.03.2018 ರಂದು ಬಲ್ಕಿಶ್ ಎಂಬುವವರಿಗೆ ಆಸ್ತಿಯನ್ನು ಮಾರಾಟ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. 2018 ರಲ್ಲಿ 1 ನೇ ಪ್ರತಿವಾದಿ 2 ನೇ ಪ್ರತಿವಾದಿಗೆ ಆಸ್ತಿಯನ್ನು ಮಾರಾಟ ಮಾಡುವಾಗ ಕ್ರಯದ ಕರಾರಿನಲ್ಲಿ ಹೇಳಿರುವ ಆಸ್ತಿಯ ಇ-ಸ್ವತ್ತಿನ ಖಾತೆ ಆಗಿತ್ತು ಎಂದರೆ ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿ ನಿಜವಾಗಿ ಆಸ್ತಿಯನ್ನು ಮಾರಾಟ ಮಾಡಲು ಹೊರಟಿದ್ದರೆ ನಿ.ಪಿ.1 ರಲ್ಲಿ ಈ ಸ್ವತ್ತಿನ ಸಂಖ್ಯೆಯನ್ನು ನಮೂದಿಸುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ನನ್ನ ಗಂಡ ದಾವಾ ಶೆಡ್ಯೂಲ್ ನಲ್ಲಿಯು ಸಹ ಆಸ್ತಿಯ ಇ-ಸ್ವತ್ತಿನ ಸಂಖ್ಯೆಯನ್ನು ನಮೂದಿಸಿಲ್ಲ ಎಂದರೆ ನನಗೆ ಗೊತ್ತಿಲ್ಲ.

(ಮುಂದುವರೆದ ಪಾಟೀ ಸವಾಲು ಮಾಡಲು ಕಾಲವಕಾಶ ಕೋರಿದ್ದು, ಕಾಲವಕಾಶ ನೀಡಲಾಯಿತು)

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.

ದಿಃ 01.08.2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು

ಮುಂದುವರೆದ ಪಾಟೀ ಸವಾಲು ಶ್ರೀ ಡಿ.ಎಸ್ ವಕೀಲರಿಂದ 2 ನೇ ಪ್ರತಿವಾದಿ ಪರವಾಗಿ

16. ನನಗೆ ತಾಲ್ಲೂಕು ಪಂಚಾಯಿತಿ ಸದಸ್ಯರಾದ ರಫೀಕ್ ಎಂಬುವವರ ಪರಿಚಯ ಇಲ್ಲ. ಮಹೇಶ್ ಎಂಬುವವರ ಪರಿಚಯ ಇರುತ್ತದೆ. ಪ್ರವೀಣ್ ಎಂಬುವವರ ಪರಿಚಯ ನನಗೆ ಇಲ್ಲ. ಬೆಂಗಳೂರಿನ ಶಿವಾಜಿ ನಗರದ ಹಿರಿಯ ಉಪನೊಂದಾವಣಾ ಅಧಿಕಾರಿಗಳು ನಿ.ಪಿ.1 ರ ಕ್ರಯದ ಕರಾರಿನ ಮೊದಲನೇ ಪುಟದ ಮೇಲ್ಭಾಗದಲ್ಲಿ ಹಾಕಿರುವ ಉಬ್ಬುಚ್ಚು ಮುದ್ರೆ (Embossing) ನಮ್ಮ ಕಚೇರಿಯಿಂದ ನೀಡಲಾಗಿರುವುದಿಲ್ಲ ಎಂದು 2 ನೇ ಪ್ರತಿವಾದಿಗೆ ಪತ್ರ ನೀಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನಿ.ಪಿ.1 ರ ಮೊದಲನೇ ಪುಟದ ಮೇಲ್ಭಾಗದಲ್ಲಿ 44147 ಸಂಖ್ಯೆಯನ್ನು ಶಿವಾಜಿನಗರದ ಹಿರಿಯ ಉಪನೊಂದಾವಣಾ ಕಚೇರಿಯಿಂದ ನೀಡಲಾಗಿಲ್ಲ ಎಂದರೆ ನನಗೆ ಗೊತ್ತಿಲ್ಲ.

17. ನನ್ನ ಗಂಡ ಬದುಕಿದ್ದಾಗ ಪ್ರವೀಣ್, ಮಹೇಶ್, ಮೊಹಮದ್ ರಫೀಕ್, ನನ್ನ ಗಂಡ ಮತ್ತು ಈ ಕರಾರನ್ನು ಮಾಡಿಕೊಂಡಿರುವ 1 ನೇ ಪ್ರತಿವಾದಿಗೆ ಅಬ್ದುಲ್ ಅಶ್ರಫ್ ರವರು ಸೇರಿ ಸೃಷ್ಟಿಸಿದ್ದಾರೆ ಎಂದರೆ ಸುಳ್ಳು. ಈ ಮೇಲೆ ಹೇಳಿದ ವ್ಯಕ್ತಿಗೆ ನಿ.ಪಿ.1 ಅನ್ನು ಫೋರ್ಜರಿ ಮಾಡಿದ್ದಾರೆ ಎಂದರೆ ಸುಳ್ಳು. ನನ್ನ ಮಾವನನ್ನು ಈ ಕೇಸಿನಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ. ನನ್ನ ಗಂಡನ ತಂದೆಯನ್ನು ಈ ಪ್ರಕರಣದಲ್ಲಿ ಪಕ್ಷಗಾರರಾಗಿ ಮಾಡದ ಕಾರಣ ಈ ಪ್ರಕರಣ ಊರ್ಜಿತವಲ್ಲ ಎಂದರೆ ಸರಿಯಲ್ಲ.

18. ದಿಃ 19.03.2018 ರಂದು ನನ್ನ ಗಂಡ ಕ್ರಯದ ಕರಾರು ಮಾಡಿಕೊಂಡಿರುವ ಸ್ವತ್ತನ್ನು 1 ನೇ ಪ್ರತಿವಾದಿ 2 ನೇ ಪ್ರತಿವಾದಿಗೆ ಮಾರಾಟ ಮಾಡಿ ಆಗಿತ್ತು ಎಂದರೆ ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿ ದಾವ ಸ್ವತ್ತನ್ನು 2 ನೇ ಪ್ರತಿವಾದಿಗೆ ಮಾರಾಟ ಮಾಡಿದ ಬಳಿಕ ನನ್ನ ಗಂಡ ಈ ಮೇಲೆ ಹೇಳಿದ ವ್ಯಕ್ತಿಗಳ ಜೊತೆ ಸೇರಿ ನಿ.ಪಿ.1 ಅನ್ನು ಫೋರ್ಜರಿ ಮಾಡಿದ್ದರು ಎಂದರೆ

ಸರಿಯಲ್ಲ. ನಿ.ಪಿ.1 ಕ್ರಯದ ಕರಾರಿಗೆ ಯಾವುದೇ ಕಾನೂನಿನ ಮಾನ್ಯತೆ ಇಲ್ಲ ಎಂದರೆ ಸರಿಯಲ್ಲ. ನಿ.ಪಿ.1 ಕ್ರಯದ ಕರಾರು ನಿರ್ದಿಷ್ಟ ಪರಿಹಾರಕ್ಕೆ ಅರ್ಹದಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಎಲ್ಲಾ ವಿಚಾರಗಳು ಸತ್ಯಕ್ಕೆ ದೂರವಾಗಿವೆ ಎಂದರೆ ಸರಿಯಲ್ಲ. ಈ ದಾವೆ ವಜಾ ಆಗತಕ್ಕದ್ದು ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.

ಸಾಕ್ಷಿಯ ಸಹಿ

ಮಾ